1887ನೇ ಇಸವಿ ಅರ್ಜೀ ನಂಬರ್ 43 .

ಮೃತಪಟ್ಟ ಸುಬ್ರಹ್ಮಣ್ಯಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಗೌರಮ್ಮ, 2ನೇ ತಿಂಮಮ್ಮ, 3ನೇ ಮೈನರಾದ್ದರಿಂದ ಗಾರ್ಡಿಯನ್ ಮತ್ತು ಇವಳ ಅತ್ತ 1ನೇ ಅರ್ಜೀದಾರಳು, ಮೃತಪಟ್ಟ ಸದರೀ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ 1ನೇ ತಾಯಿ 2ನೇ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೊಳೀನರಸೀಪುರದ ಈಸಬ್ಯಾ ಸ್ಥಳದ ಸದರೀ ಗೌರಮ್ಮ, ತಿಂಮಮ್ಮ ಸಹ ಸದರೀ ವಾಸಸ್ಥನಾಗಿ ಮೃತಪಟ್ಟ ಸುಬ್ರಹ್ಮಣ್ಯಶಾಸ್ತ್ರಿಗಳ ಜಿಂದಗೀ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಗೌರಮ್ಮ, 2ನೇ ತಿಂಮಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ರಹ್ಮಣ್ಯಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 23ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 430.

ಮೃತಪಟ್ಟ ಶಿದ್ದಲಿಂಗಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶಿದ್ದಲಿಂಗಶೆಟ್ಟಿ ವುರಫ್ ಮರಿಶೆಟ್ಟಿಯು ಮೃತಪಟ್ಟ ಸದರೀ ಶಿದ್ದಲಿಂಗಶೆಟ್ಟಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೇ ಸ್ಥಳದ ಸದರೀ ಶಿದ್ದಲಿಂಗಶೆಟ್ಟಿ ವುರಫ್ ಮರಿಶೆಟ್ಟಿ ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದಲಿಂಗಶೆಟ್ಟರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗಶೆಟ್ಟಿ ವುರಫ್ ಮರಿಶೆಟ್ಟರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ಧಲಿಂಗಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 461.

ಮೃತಪಟ್ಟ ಕೆಂಪಾಮೇಸ್ತ್ರೀರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಲಿಂಗ ಮೈನರ್ ಗಿರ್ಡಿಯನ್ ಮತ್ತು ತಾಯಿ ಈರಮ್ಮನು ಮೃತಪಟ್ಟ ಸದರೀ ಕೆಂಪಾಮೇಸ್ತ್ರೀಗೆ ಮಗ, ಹೆಂಡತಿ ಆಗಬೇಕೆಂಬಹಕ್ಕುದಾರೀ ಮೇಲೆ ನಾಗಮಂಗಲದ ತಾ|| ಚನ್ನಪಟ್ಟಣ ಸ್ಥಳದ ಸದರೀ ಈರಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ಕೆಂಪಾಮೇಸ್ತ್ರೀರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರರಾದ ಈರಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪಾಮೇಸ್ತ್ರೀರ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ನಂ. 9. ತಾರೀಖು 12ನೇ ಆಗಸ್ಟ್ 1887.

ಯಡತೊರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜುಗಳನ್ನ ಕ್ರಮವಾದ ವಾರಸುದಾರ್‌ಗಳಿಗಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯ್ತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ಸು ಪಡಿಯಬೇಕು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ನಂಬರ ಇಸವಿ.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿಷ್ಟ.	ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು ಮತ್ತು ಅಡಿಷ್ಟ.	ರಿಜಿಸ್ಟ್ರಾರ ಹಾಜರಾದ ತಾರೀಖು.	ರಿಜಿಸ್ಟ್ರಾರ ಸಹಿ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
272	ಯಡತೊರೆ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಕೊಪ್ಪಲು ವೀರಪ್ಪನ ಮಕ್ಕಳು ಬಸವಂಣ, ವೀರಂಣ, ನಾಗಂಣ ಸಹ	ಯಡತೊರೆ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿ ಬಂದಿರುವ ವೈನಾಡು ತಾಲ್ಲೂಕು ತಲ್ಪಾತಿ ಚಾಮೇಗೌಡನ ಮಗ ಚಾಮೇಗೌಡ.	19—5—85	2—9—85	ಹಿತ್ತಲು ನಿವೇಶನದ ಕ್ರಯಪತ್ರ ರೂಪಾಯಿ (50)
1885-86ನೇ ಇಸವಿ					
268	ಯಡತೊರೆ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಜನ್ನವ್ಯವ ಲಿಂಗಣನ ಮಕ್ಕಳು ಬಸವಂಣ ಇವನ ತಂಮ ಪುಟ್ಟು ಸಹ	ಡಿಟೋ	ಡಿಟೋ	ಡಿಟೋ	ಭೂಸ್ಥಿತಿ ಆಧಾರ ಪತ್ರ ರೂಪಾಯಿ (50)
ಡಿಟೋ					
270	ಯಡತೊರೆ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಕೊಪ್ಪಲು ಲಿಂಗೇಗೌಡನ ವೀರಪ್ಪನ ಮಗ ವೀರಂಣ	ಡಿಟೋ	ಡಿಟೋ	ಡಿಟೋ	ಡಿಟೋ
ಡಿಟೋ					
305	ಯಡತೊರೆ ತಾಲ್ಲೂಕು ಸರ್ವ ಮಾನ್ಯ ಕುಂದೂರು ಗ್ರಾಮದಲ್ಲಿ ಇರುವ ಕುರುಬರ ಜಾತಿ ಮರಿಗೌಡ	ಹುಣಸೂರು ತಾಲ್ಲೂಕು ಚಿಕ್ಕ ಅಡಗನಹಳ್ಳಿ ಗ್ರಾಮದಲ್ಲಿರುವ ಅಗಸಾಲೀ ರುದ್ರಾಚಾರಿ ಮಗ ನಂಜಾಚಾರಿ	22—5—85	4—6—85	ಸರ್ವಮಾನ್ಯ ಮಲ್ಲಿಕೆರೆಗ್ರಾಮದ ವೃತ್ತಿ ಜಮೀರ್ವ ವಳಮೆಹಕ್ಕು ಕ್ರಯ ಪತ್ರ 90 ರೂಪಾಯಿ
ಡಿಟೋ					
344	ಡಿಟೋ ತಾಲ್ಲೂಕು ಡಿಟೋ ಗ್ರಾಮದಲ್ಲಿರುವ ಶಂಕರಂಪಾಡಿ ತಾತಾಚಾರ್ಯ	ಮೈಸೂರು ಚಲುವಾಂಬಾ ಅಗ್ರಹಾರದಲ್ಲಿರುವ ಶ್ರೀಕಂಠಸೋಮಯಾಜಿ ಕುಟುಂಬ ರಾಮಕ್ಕಮ್ಮ	30—5—85	6—6—85	ಭೂಸ್ಥಿತಿ ಕ್ರಯ ಪತ್ರ (50) ರೂಪಾಯಿ.
ಡಿಟೋ					

ಟಿ. ಆನಂದರಾವ್, ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಕಚೇರಿಯಿಂದಾ.

ಇಸ್ತಿಹಾರ್‌ನಾಮಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರು ಸಾಗರ ತಾಲ್ಲೂಕು ತಾಳಗುಪ್ಪೇ ಕಸಬು ಮತ್ತ ಶಿವಲಿಂಗಯ್ಯನ ಖಾತೇ ಬಾಬತು ಸರ್ವೇ ನಂಬರು 109ನೇ ಜಮೀನಿನಲ್ಲಿ ಆ ಗ್ರಾಮದ ಮಡಿವಾಳ ಮಾಪ ವಗೈರೇರಿಗೆ ಸಿಕ್ಕಿದ್ದಿಂತ ಹಾಜರಾದ ಇಕ್ಕೇರೀ ನಾಣ್ಯಗಳು 17, ಹೊನ್ನು, 3 ಹೀಗೆ 20 ಸಾಗರ ತಾಲ್ಲೂಕು ಕಚೇರಿಯಲ್ಲಿ ಡಿಪಾಜಿಟ್ ಇಡ್ಲಾಟ್ಟು ಇದೆ.

ಸದರೀ ನಾಣ್ಯಗಳ ಖಚ್ಚೆ ಯಾಪ ದಾವಾ ಯಾ ಹಕ್ಕು ದಾರೀ ಉಳ್ಳವರು ರೂಬರೂಪ್ ಆಗಲಿ ಕ್ರಮವಾದ ವಕೀಲ ಮೂಲಕವಾಗ ಲಿ ಈ ತಾರೀಖು ಲಾಗಾಯಿತು 6 ತಿಂಗಳವಳಗೆ ಸಾಗರ ತಾಲ್ಲೂಕು ಕಚೇರೀ ರೂಬರೂ ಹಾಜರಾಗಿ ಸದರೀ ನಾಣ್ಯಗಳಿಗೆ ಇರುವ ತಮ್ಮ ಬಾಧ್ಯತೆಯನ್ನು ರುಜುವಾತು ಮಾಡಿಕೊಡಬೇಕು.

ಆ ಪ್ರಕಾರ ನಡದುಕೊಳ್ಳದೇ ಇದ್ದರೆ ವಾಯಿದೇ ಆದನಂತರ ರೂಲ್ಸ್ ಅನುಸರಿಸಿ ಜಾರೀ ಮಾಡೋಣವಾದೀತು.

ತಾರೀಖು 23ನೇ ಆಗಸ್ಟ್ 1887ನೇ ಇಸವಿ ಮೊಕ್ಕಾಂ ಶಿವಮೊಗ್ಗಾ.

ವಿ. ಪಿ. ಮಾಧವರಾವ್,
ಡೆಪ್ಯುಟಿ ಕಮ್ಮಿಷನರ್.